**ದಿನಾಂಕ: 03-02-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1ನೇ ಪ್ರತಿವಾದಿ ಪರ ಶ್ರೀಮತಿ ಎಸ್.ಪಿ. ವಕೀಲರಿಂದ**

4. ಈ ದಾವೆಯಲ್ಲಿರುವ ಗೊಲ್ಲಾಳಪ್ಪಗೌಡ ನಿಮಗೆ ಅಣತಮ್ಮಕಿ ಸಂಬಂಧಿಕರಾಗಬೇಕು ಎಂದರೆ ಸರಿ. ನಿಮ್ಮ ತಂದೆಯ ತಾಯಿ ಮತ್ತು 3ನೇ ಪ್ರತಿವಾದಿಯ ತಾಯಿ ಸವತಿಯರು ಎಂದರೆ ಸರಿ. ಗಂಗಾಬಾಯಿ ನಿಮ್ಮ ಅಜ್ಜಿ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆ ಮತ್ತು ನಮ್ಮ ಕಾಕನ ಮಧ್ಯೆ ಮೊದಲು ವಿಭಾಗ ಆಗಿರುತ್ತದೆ.

5. ನಿಮ್ಮ ಮನೆಯಲ್ಲಿ ಹಿರಿಯರು ಎಂದರೆ ನಿಮ್ಮ ತಂದೆ ಎಂದರೆ ಸರಿ. ನಿಮ್ಮ ತಂದೆ ಮನೆಗೆ ಹಿರಿಯರಿದ್ದ ಕಾರಣ ಮನೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿಯ ಮೊದಲನೇ ಹೆಂಡತಿಗೆ ನಾನು ಒಬ್ಬಳೇ ಮಗಳು ಇರುತ್ತೇನೆ. ನಿಮ್ಮ ತಂದೆ ಕುಟುಂಬದ ಅಡಚಣೆಗಾಗಿ ಸ.ನಂ.293/1 ರಲ್ಲಿ 10 ಎಕರೆ 18 ಗುಂಟೆ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಮಾರಾಟ ಮಾಡಿದ 2 ವರ್ಷಗಳ ನಂತರ ಗೊತ್ತಾಗಿ ಈ ದಾವೆಯನ್ನು ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸ.ನಂ.293/1 ರಲ್ಲಿ 10 ಎಕರೆ 18 ಗುಂಟೆ ಜಮೀನನ್ನು ಖರೀದಿ ಮಾಡಿದ ದಿನಾಂಕದಿಂದ 3ನೇ ಪ್ರತಿವಾದಿ ಅವರೇ ಕಬ್ಜೆಯಲ್ಲಿ ಇದ್ದು ಅವರೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಅವರ ಮಗಳಿಗೆ ಹೊಲವನ್ನು ಬಿಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

6. ಸ.ನಂ.129/5 ರಲ್ಲಿ 3 ಎಕರೆ 13 ಗುಂಟೆ ಜಮೀನು 8ನೇ ಪ್ರತಿವಾದಿಗೆ ಅವರ ತವರು ಮನೆಯವರು ಖರೀದಿ ಮಾಡಿಕೊಟ್ಟಿದ್ದಾರೆ ಎಂದರೆ ಸ.ನಂ.293 ನ್ನು ಮಾರಾಟ ಮಾಡಿ ಈ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ-6 ಖರೀದಿ ಪತ್ರವನ್ನು ತೋರಿಸಲಾಗಿ ಅದರಲ್ಲಿ ಸ.ನಂ.293 ರ ಜಮೀನನ್ನು ಮಾರಾಟ ಮಾಡಿ

ಈ ಜಮೀನು ಖರೀದಿ ಮಾಡಿದ್ದಾರೆ ಎಂದು ಅದರಲ್ಲಿ ಬರೆದಿದ್ದಾರಾ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗೆ ಸ.ನಂ.293/1 ಒಂದೇ ಆಸ್ತಿ ಇದ್ದು ಅದನ್ನು ಮಾರಾಟ ಮಾಡಿದ ಸಲುವಾಗಿ ಜೀವನೋಪಾಯಕ್ಕೆ ಏನೂ ಇಲ್ಲ ಎಂದು 8ನೇ ಪ್ರತಿವಾದಿಯ ತವರು ಮನೆಯವರು ಸ.ನಂ.129/5 ಜಮೀನನ್ನು 8ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ.ನಂ.129/5 ಜಮೀನು 8 ನೇ ಪ್ರತಿವಾದಿಯ ಸ್ವಂತ ಆಸ್ತಿ ಆಗಿದ್ದರಿಂದ ನಿಮಗೆ ಅದರ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯ ಐಟಂ ನಂ.6 ಮತ್ತು 7 ರ ದಾಖಲೆಗಳು ಹಾಜರುಪಡಿಸಿದ್ದೀರಾ ಎಂದರೆ ಮನೆಯ ಉತಾರ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಎರಡೂ ಆಸ್ತಿಗಳು ನಿಮ್ಮ ತಂದೆಗೆ ಹಿರಿಯರಿಂದ ಬಂದಿದೆ ಮತ್ತು ನಿಮ್ಮ ತಂದೆಗೆ ಸಂಬಂಧಪಟ್ಟಿದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಮನೆಯ ಉತಾರ ಕೊಟ್ಟಿರುತ್ತೇನೆ ಆದರೆ ಹಿರಿಯರಿಂದ ಬಂದಂತಹ ಮನೆ ಇತ್ತು ಅದನ್ನು ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ಮನೆಯನ್ನು ಮಾರಾಟ ಮಾಡಿ ಇನ್ನೊಂದು ಮನೆಯನ್ನು ಖರೀದಿ ಮಾಡಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇನ್ನೂ ತೆಗೆಸಿಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಮನೆಗಳು, ದಾವಾ ಆಸ್ತಿಯ ಐಟಂ ನಂ.6 ಮತ್ತು 7 ರಲ್ಲಿ ತೋರಿಸಿದಂತಹ ಆಸ್ತಿಗಳು ಹಿರಿಯರಿಂದ ಬಂದಿದೆ ಮತ್ತು ನಿಮ್ಮ ತಂದೆಗೆ ಸಂಬಂಧಪಟ್ಟದೆ ಎಂದು ದಾಖಲೆಗಳು ಇಲ್ಲದಿದ್ದರೂ ಸಹ ಅವುಗಳನ್ನು ಈ ದಾವೆಯಲ್ಲಿ ಸೇರಿಸಿದ್ದೀರಿ ಎಂದರೆ ಸರಿಯಲ್ಲ.

8. ದಾವಾದ ಆಸ್ತಿಯ ಐಟಂ ನಂ.1 ನ್ನು ನಿಮ್ಮ ಖರ್ಚು ವೆಚ್ಚಕ್ಕಾಗಿ ನಿಮ್ಮ ತಂದೆ ಮಾರಾಟ ಮಾಡಿದ್ದರಿಂದ ಅದರಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನೀವು ಬಹಳ ಸಶಕ್ತರಿದ್ದೀರಿ ಎಂದು ತೋರಿಸಲು ಮತ್ತು ಬ್ಯಾಂಕಿನಲ್ಲಿ ಹಣ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ನಮಗೆ ಕ್ಯಾನಲ್ ದುಡ್ಡು ಬಂದಿತ್ತು ನಮಗೆ ಕಿರಾಣಿ ಅಂಗಡಿ ಇತ್ತು ಬೆಳೆಯ ಮಾಲು ಎಲ್ಲಾ ನಮಗೆ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ವಾದಪತ್ರ ಮತ್ತು ತಿದ್ದುಪಡಿ ವಾದಪತ್ರದಲ್ಲಿ ಕ್ಯಾನಲ್ ದುಡ್ಡು ಬಂದಿತ್ತು ನಮಗೆ ಕಿರಾಣಿ ಅಂಗಡಿ ಇತ್ತು ಬೆಳೆಯ ಮಾಲು ಎಲ್ಲಾ ನಮಗೆ ಬರುತ್ತಿತ್ತು ಎಂದು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರು ನಿಮ್ಮ ಮನೆಯಲ್ಲಿ ಹಿರಿಯರಿದ್ದ ಕಾರಣ ಕುಟುಂಬದ ಅಡಚಣೆ ಮತ್ತು ಅವಶ್ಯಕತೆಗಾಗಿ ದಾವಾದ ಐಟಂ ನಂ.1 ಸ.ನಂ.293/1 ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಆಸ್ತಿಯಲ್ಲಿಯೂ ಸಹ ಭಾಗ ಪಡೆಯುವ ದುರುದ್ದೇಶದಿಂದ ಸದರಿ ಆಸ್ತಿಯ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ. ಸ.ನಂ.304 ರಲ್ಲಿ 8 ಎಕರೆ ಜಮೀನು ಮಾತ್ರ ಹಿರಿಯರ ಆಸ್ತಿ ಇರುವುದರಿಂದ ಅದರಲ್ಲಿ ನಿಮಗೆ ಎಷ್ಟು ಭಾಗ ಬರುತ್ತದೆ ಅಷ್ಟು ಭಾಗ ಕೊಡಲು 1ನೇ ಪ್ರತಿವಾದಿ ತಯಾರು ಇದ್ದಾರೆ ಎಂದರೆ ಅವರು ಸರಿಯಾಗಿ ಪಾಲು ಮಾಡಲ್ಲ ಎಂದು ಉತ್ತರಿಸುತ್ತಾರೆ. ಎಲ್ಲಾ ಆಸ್ತಿಗಳಲ್ಲಿ ಭಾಗ ಪಡೆಯುವ ದುರುದ್ದೇಶದಿಂದ 1 ಮತ್ತು 8ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ